ಪ್ರಾರ್ಥನೆ

# ಶ್ರೀಶಾರದಾದೇವಿ ಸ್ತೋತ್ರಮ್

**ಶ್ರೀರಾಮಕೃಷ್ಣಸಹಧರ್ಮಿಣೆ ಭವ್ಯದಿವ್ಯ-**
**ಶ್ರೀರಾಜಮಾನವದನೇ ವಿಹಿತಾವದಾನೇ**
**ವೈರಾಗ್ಯಶಾಲಿನಿ ವಿಶಿಷ್ಟಗುಣಾಂಬುರಾಶೇ**
**ಶ್ರೀಶಾರದೇ ಸುಚರಿತೇ ತವ ಸುಪ್ರಭಾತಮ್ ॥೧॥**

ಶ್ರೀರಾಮಕೃಷ್ಣರ ಸಹಧರ್ಮಿಣಿ, ದಿವ್ಯವೂ, ಭವ್ಯವೂ ಆದ ಕಾಂತಿಯಿಂದ ಬೆಳಗುತ್ತಿರುವ ಮುಖವುಳ್ಳ ದೇವಿ, ಶ್ರೇಷ್ಠವಾದ ಕಾರ್ಯಗಳನ್ನು ನೆರವೇರಿಸುತ್ತಿರುವ ವೈರಾಗ್ಯಶಾಲಿನಿಯೆ, ವಿಶಿಷ್ಟ ವಾದ ಗುಣಗಳ ಸಾಗರೆ ನೀನಮ್ಮ, ಉತ್ತಮ ಚರಿತೆ, ದೇವಿ ಶ್ರೀ ಶಾರದೆ, ನಿನಗೆ ಸುಪ್ರಭಾತ !

**ಕಲ್ಯಾಣಕಾರಿಣಿ ನೃಣಾಂ ಶರಣಾಗತಾನಾಂ**
**ಶಲ್ಯಾಪನೋದನಪರೇ ವಿಗತಾಭಿಲಾಷೇ ।**
**ತೌಲ್ಯಾತಿರಿಕ್ತವಿಭವೇ ಮಹಿತಾನುಭಾವೇ**
**ಶ್ರೀಶಾರದೇ ಸುಚರಿತೇ ತವ ಸುಪ್ರಭಾತಮ್ ॥೨॥**

ಮಾನವರಿಗೆ ಮಂಗಳವನ್ನುಂಟುಮಾಡುವವಳೆ, ಶರಣಾ ಗತರ ಬಾಧೆಗಳನ್ನು ನಿವಾರಿಸುವವಳೆ, ಆಸೆಗಳೇ ಇಲ್ಲದವಳೆ, ಹೋಲಿಸಲಾಗದ ವಿಶಿಷ್ಟವಾದ ವೈಭವವುಳ್ಳವಳೆ, ಶ್ರೇಷ್ಠವಾದ ಅನುಭವಗಳುಳ್ಳ ತಾಯಿ ಶಾರದೆ, ಸುಚರಿತೆ, ನಿನಗೆ ಸುಪ್ರಭಾತ.

**ಅತ್ಯಂತಶಾಂತಮನಸಾಂ ನಿಜಸೇವಕಾನಾಂ**
**ಅತ್ಯಂತರೋಲ್ಲಸಿತಮಂಗಲದಿವ್ಯರೂಪೇ ।**
**ಸ್ತುತ್ಯರ್ಹಶೀಲಗುಣಶಾಲಿನಿ ಶಾಂತಶೀಲೇ**
**ಶ್ರೀಶಾರದೇ ಸುಚರಿತೇ ತವ ಸುಪ್ರಭಾತಮ್ ॥೩॥**

ಅತ್ಯಂತ ಶಾಂತವಾದ ಮನಸ್ಸುಳ್ಳ ನಿನ್ನ ಸೇವಕರ ಅಂತರಂಗ ದಲ್ಲಿ ಬೆಳಗುವ ದಿವ್ಯಮಂಗಳ ರೂಪವುಳ್ಳ ಜನನಿ, ಹೊಗಳಿಕೆಗೆ



ಅರ್ಹವಾದ ಗುಣಗಣಿಯೆ, ಶಾಂತವಾದ ಸ್ವಭಾವವುಳ್ಳ ದೇವಿ ಶಾರದೆ, ಸುಚರಿತೆ, ನಿನಗೆ ಸುಪ್ರಭಾತ.

**ಆನಂದದಾಯಿನಿ ನೃಣಾಂ ನಿಜವಾಗ್ವಿಲಾಸೈ-**
**ರ್ಧ್ಯಾನಸ್ಥಶಿಷ್ಯಗಣಮಾನಸರಾಜಮಾನೇ ।**
**ಆನಮ್ರಭಕ್ತಜನಸೇವಿತಪಾದಯುಗ್ಮೇ**
**ಶ್ರೀಶಾರದೇ ಸುಚರಿತೇ ತವ ಸುಪ್ರಭಾತಮ್ ॥೪॥**

ನಿನ್ನ ವಾಗ್ವಿಲಾಸದಿಂದ, ಮೃದುವಾದ ಮಾತುಗಳಿಂದ ಜನ ರಿಗೆ ಆನಂದವನ್ನುಂಟು ಮಾಡುವ, ಧ್ಯಾನಲೀನರಾದ ಶಿಷ್ಯರ ಮನಸ್ಸಿನಲ್ಲಿ ವಿರಾಜಮಾನಳಾಗಿರುವ, ವಿನೀತರಾದ ಭಕ್ತಜನ ರಿಂದ ಸೇವಿಸಲ್ಪಡುವ ಪಾದಗಳುಳ್ಳ ಜನನಿ, ಸುಚರಿತೆ, ಶಾರದೆ – ನಿನಗೆ ಸುಪ್ರಭಾತ.

— ಸ್ವಾಮಿ ಜ್ಞಾನಾನಂದ ಸರಸ್ವತೀ

ಸೂಕ್ತಿಪ್ರಭ

## ರಾಮಾಯಣ ಸೂಕ್ತಿಗಳು

**ಕುಲೀನಮಕುಲೀನಂ ವಾ ವೀರಂ ಪುರುಷಮಾನಿನಮ್ ।**
**ಚಾರಿತ್ರಮೇವ ವ್ಯಾಖ್ಯಾತಿ ಶುಚಿಂ ವಾ ಯದಿ ವಾಶುಚಿಮ್ ॥**

ಮನುಷ್ಯನು ಉತ್ತಮ ಕುಲದವನೆ, ಕುಲಹೀನನೆ, ವೀರನೆ, ಹೇಡಿಯೆ, ಶುದ್ಧ ಹೃದಯದವನೆ, ಕಶ್ಮಲಹೃದಯದವನೆ ಎಂಬುದನ್ನು ಅವನ ನಡತೆಯೇ ಸ್ಪಷ್ಟವಾಗಿ ತೋರಿಸಿಕೊಡು ವುದು. *(೨.೧೦೯.೩)*

**ಧರ್ಮಾದರ್ಥಃ ಪ್ರಭವತೇ ಧರ್ಮಾತ್ ಪ್ರಭವತೇ ಸುಖಮ್ ।**
**ಧರ್ಮೇಣ ಲಭತೇ ಸರ್ವಂ ಧರ್ಮಸಾರಮಿದಂ ಜಗತ್ ॥**

ಧರ್ಮದಿಂದಲೇ ಅರ್ಥ; ಧರ್ಮದಿಂದಲೇ ಸುಖ. ಸಕಲ ಅಭೀಷ್ಟವೂ ಧರ್ಮದಿಂದ ಕೈಗೂಡುತ್ತದೆ. ಈ ಜಗತ್ತು ಧರ್ಮದ ತಳಹದಿಯ ಮೇಲೆ ನಿಂತಿದೆ. *(೩.೯.೩೦)*

**ಉತ್ಸಾಹೋ ಬಲವಾನಾರ್ಯ ನಾಸ್ತ್ಯುತ್ಸಾಹಾತ್ ಪರಂ ಬಲಮ್ ।**
**ಸೋತ್ಸಾಹಸ್ಯಾಸ್ತಿ ಲೋಕೇಷು ನ ಕಿಂಚಿದಪಿ ದುರ್ಲಭಮ್ ॥**
**ಉತ್ಸಾಹವಂತಃ ಪುರುಷಾಃ ನಾವಸೀದಂತಿ ಕರ್ಮಸು ।**

ಉತ್ಸಾಹವೇ ಕಾರ್ಯಸಿದ್ಧಿಗೆ ಪ್ರಬಲವಾದ ಸಾಧನ. ಉತ್ಸಾಹಕ್ಕಿಂತ ಪ್ರಬಲವಾದದ್ದು ಇನ್ನೊಂದಿಲ್ಲ. ಉತ್ಸಾಹಶಾಲಿಗೆ ಈ ಜಗತ್ತಿನಲ್ಲಿ ದುರ್ಲಭವಾದುದೇ ಇಲ್ಲ. ಉತ್ಸಾಹಿಗಳಾದ ಜನರು ಯಾವ ಕಾರ್ಯದಲ್ಲಿಯೂ ವಿಫಲರಾಗುವುದಿಲ್ಲ. *(೪.೧.೧೨೧)*

**ಆಹುಃ ಸತ್ಯಂ ಹಿ ಪರಮಂ ಧರ್ಮಂ ಧರ್ಮವಿದೋ ಜನಾಃ ।**

ಧರ್ಮಜ್ಞರಾದ ಜನರು ಸತ್ಯವೇ ಶ್ರೇಷ್ಠವಾದ ಧರ್ಮ ವೆಂದು ಹೇಳುತ್ತಾರೆ. ಸತ್ಯವನ್ನು ಹಿಡಿದು ಧರ್ಮಮಾರ್ಗ ದಲ್ಲಿ ಹೋಗೆಂದು ನಿನಗೆ ಹೇಳುತ್ತೇನೆ. *(೨.೧೪.೩)*